# ಸಂಗಾತಿ 'ಚೆ'

ಕ್ಯೂಬಾದ ಪ್ರಧಾನಿ ಫಿಡೆಲ್ ಕಾಸ್ಟ್ರೊಗೆ ಅವರ ತಂದೆ–ತಾಯಿ ಬರೆದ ಪತ್ರಗಳು 1967ರ ಮೇ 23ರಂದು ಅಲ್ಲಿನ ಪತ್ರಿಕೆಯೊಂದರಲ್ಲಿ ಪ್ರಕಟವಾದವು. ಆ ಹೊತ್ತಿಗಾಗಲೇ ಕಾಸ್ಟ್ರೋ ಹಾಗೂ ಆತನ ಸ್ನೇಹಿತ ಚೆಗುವೆರಾನ ಸುತ್ತ ಹರಡಿದ ಊಹಾಪೋಹಗಳಿಗೆ ಉತ್ತರ ಎಂಬಂತೆ ಆ ಪತ್ರಗಳು ಬಿಂಬಿತವಾದವು. ಆ ಸಂದರ್ಭದಲ್ಲಿ 'ಚೆ' ಎಂದೇ ಚೆಗುವಾರ ಪರಿಚಯವಾದ. ಆತನ ಹೆಸರು ದೇಶಗಳ ಗಡಿ ದಾಟಿ ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ವಿರುದ್ಧದ ದನಿಯಾಗಿ ಮೊಳಗಿತ್ತು. ಸ್ವತಃ ಕಾಸ್ಟ್ರೊಗೂ ಆತನ ಬಗ್ಗೆ ಸುಳಿವು ಇಲ್ಲದಂತೆ ಗೆರಿಲ್ಲಾ ಹೋರಾಟಕ್ಕೆ ಚೆ ತನ್ನನ್ನು ಅರ್ಪಿಸಿಕೊಂಡಿದ್ದ.

ಸತತವಾಗಿ ಗೆರಿಲ್ಲಾ ಹೋರಾಟಗಳಲ್ಲಿ ತೊಡಗಿದ್ದ ಚೆಗುವೆರಾ 1965ರ ಮಾರ್ಚ್ 14ರಂದು ಕ್ಯೂಬಾಕ್ಕೆ ವಾಪಸಾದ ನಂತರ ಮತ್ತೆಂದೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿಲ್ಲ. ಇದು ದೇಶ–ವಿದೇಶಗಳಲ್ಲಿ ಊಹಾಪೋಹಗಳನ್ನು ಹುಟ್ಟುಹಾಕಿತು. 'ಚೆ' ಬಂಧನವಾಗಿದೆ, ಕ್ಯೂಬಾದಿಂದ ಓಡಿಹೋಗಿದ್ದಾನೆ, ಕೊಲೆಯಾಗಿದೆ ಹೀಗೇ ಅಮೆರಿಕದ ಪತ್ರಿಕೆಗಳು ವರದಿ ಮಾಡುತ್ತಿದ್ದವು.

ಗೆವಾರ ಎನ್ನುವುದು ಅವನ ತಂದೆಯ ಮನೆತನದ ಹೆಸರು. ಅರ್ನೆಸ್ಟೊ ಎಂಬುದು ಅವರ ಕುಟುಂಬ ನೀಡಿದ ಹೆಸರು. ತಾಯಿಯ ಕುಟುಂಬದ ಕಡೆಯ ಲಿಂಚ್ ಸೇರಿ ಅವನ ಹೆಸರು 'ಅರ್ನೆಷ್ಟೋ ಗುವೆರಾ ಲಿಂಚ್' ಎಂದಾಗಿತ್ತು. ಅಲ್ಲಿನ ಪದ್ಧತಿಯಂತೆ ತಾಯಿ ಮತ್ತು ತಂದೆಯ ಕುಟುಂಬದ ಎರಡೂ ಹೆಸರುಗಳು ಸೇರುತ್ತಿದ್ದವು. ಎಲ್ಲರೊಡನೆ ಬೆರೆತು ನಮ್ಮವನು ಎನಿಸಿಕೊಂಡ ಅರ್ಥದಲ್ಲಿ ಚೆಗುವೆರಾ ಎನಿಸಿಕೊಂಡ. ಗೆರಿಲ್ಲಾ ಯುದ್ಧದಲ್ಲಿ ತೊಡಗಿಸಿಕೊಂಡ ಆತ ಪತ್ರದ ಕೊನೆಗೆ 'ಚೆ' ಎಂದೇ ಸಹಿ ಮಾಡುತ್ತಿದ್ದ.

ಚೆ ಕ್ರಾಂತಿಕಾರಿಯಾಗಿ ರೂಪುಗೊಳ್ಳಲು ಉತ್ತರ ಮತ್ತು ದಕ್ಷಿಣ ಅಮೆರಿಕಗಳ ನಡುವಣ ಭಿನ್ನತೆ ಕಾರಣ. ಸಾಮ್ರಾಜ್ಯಶಾಹಿ ಉತ್ತರ ಅಮೆರಿಕಕ್ಕೆ ದಕ್ಷಿಣ ಅಮೇರಿಕದಿಂದ ಸಂಪತ್ತು ಹರಿದು ಬರುತ್ತಿತ್ತು. ಚಿಲಿ, ಮೆಕ್ಸಿಕೋ, ಬ್ರೆಜಿಲ್, ಪನಾಮಾ ದೇಶಗಳಿಂದ ತಾಮ್ರ, ಎಣ್ಣೆ, ಅರಣ್ಯ ಸಂಪತ್ತು, ಹಣ್ಣುಗಳು ಉತ್ತರ ಅಮೆರಿಕದ ಪಾಲಾಗುತ್ತಿತ್ತು. ಇದರಿಂದ ದಕ್ಷಿಣದ ರಾಷ್ಟ್ರಗಳ ಪಾಲಿಗೆ ದಬ್ಬಾಳಿಕೆ ಮಾತ್ರ ಉಳಿಯುತ್ತಿತ್ತು. ಇದನ್ನೆಲ್ಲಾ ಗಮನಿಸಿದ್ದ 'ಚೆ' ಮನಸ್ಸು ಹೋರಾಟದ ಕಡೆಗೆ ತಿರುಗಿತು.

1953ರ ಜುಲೈ 26ರಂದು ಫಿಡಲ್ ಕಾಸ್ಟ್ರೋ ಮತ್ತು ಸಂಗಡಿಗರು ಕ್ಯೂಬಾದಲ್ಲಿ ಮೋನ್ಕಾಡಾ ಅರಮನೆಯೆಂದು ಹೆಸರಾಗಿದ್ದ ಶಸ್ತ್ರಾಗಾರದ ಮೇಲೆ ದಾಳಿ ಮಾಡಿದರು. ಆಗ ಬಂಧನಕ್ಕೆ ಒಳಗಾದ ಕಾಸ್ಟ್ರೋನ ವಿಚಾರಣೆ ಕ್ಯೂಬಾದ ಆಸ್ಪತ್ರೆಯಲ್ಲಿ ನಡೆಯಿತು. ಅಲ್ಲಿ ಅವನು 'ಇತಿಹಾಸ ನನ್ನನ್ನು ನಿರ್ದೋಷಿಯನ್ನಾಗಿಸುತ್ತದೆ' ಎಂದು ನೀಡಿದ ಹೇಳಿಕೆ ಪ್ರಸಿದ್ಧವಾಗಿದೆ. ಚೆಗೆ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದ ಜೋಸೆ ಮಾರ್ಟಿಯ ದಾರಿ ಆಕರ್ಷಿಸಿತು. ಮತ್ತೊಂದು ಕಡೆ ಇದೇ ಜೋಸೆ ಮಾರ್ಟಿಯ ದಾರಿ ಕಾಸ್ಟ್ರೋ ಗುಂಪಿನವರಿಗೂ ಮಾದರಿಯಾಗಿತ್ತು. ಈ ಸಂದರ್ಭದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರತಿನಿಧಿಯಂತೆ ಬಟಿಸ್ಟಾ ಸರ್ವಾಧಿಕಾರ ನಡೆಸುತ್ತಿದ್ದ. ಕಾಸ್ಟ್ರೋ, ಚೆ ಮತ್ತು ಸಂಗಾತಿಗಳ ನಿರಂತರ ಗೆರಿಲ್ಲಾ ಹೋರಾಟ ಜನವರಿ 1, 1959ರಂದು ಜಯಗಳಿಸಿ ಬಟಿಸ್ಟಾ ಕ್ಯೂಬಾವನ್ನು ಬಿಟ್ಟು ಓಡಿಹೋದ.

ಫೆ. 9ರಂದು 'ಚೆ'ಗೆ ಕ್ಯೂಬಾದ ಪೌರತ್ವವನ್ನು ನೀಡಿ ಗೌರವಿಸಲಾಯಿತು. ಫೆ. 13ರಂದು ಕಾಸ್ಟ್ರೋ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ. ಸೋವಿಯತ್ ಒಕ್ಕೂಟವು ಕ್ಯೂಬಾಕ್ಕೆ ರಾಜತಾಂತ್ರಿಕ ಮಾನ್ಯತೆಯನ್ನು ನೀಡಿತು. 1961ರಲ್ಲಿ 'ಚೆ' ಉದ್ಯಮ ಮಂತ್ರಿ ಹಾಗೂ ಕೇಂದ್ರ ಆಯೋಜನಾ ಮಂಡಳಿಯ ಸದಸ್ಯನಾಗಿ ಆಯ್ಕೆಯಾದ. 1965ರ ಅಕ್ಟೋಬರ್ 3ರವರೆಗೆ ಕ್ಯೂಬಾದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡ ಚೆ, ರಾಷ್ಟ್ರೀಯ ಮಟ್ಟದಲ್ಲಿನ ತನ್ನೆಲ್ಲಾ ಸ್ಥಾನಮಾನ ತ್ಯಜಿಸಿ ಕಾಸ್ಟ್ರೋನಿಂದ ಬೀಳ್ಕೊಂಡು ಬೊಲಿವಿಯಾಕ್ಕೆ ಅಜ್ಞಾತನಾಗಿ ತೆರಳುತ್ತಾನೆ.

ಅಪರಚಿತ ಕಾಡುಮೇಡುಗಳಲ್ಲಿ ತನ್ನ ಅಸ್ತಮಾಕ್ಕೆ ಔಷಧ ಸಿಗದೆ ಕಷ್ಟಗಳನ್ನು ಅನುಭವಿಸುತ್ತಾನೆ. ಕ್ಲಿಷ್ಟ ಸಂದರ್ಭ, ಪ್ರತಿಕೂಲ ಹವಾಮಾನದಲ್ಲಿ ಅ. 8ರಂದು ಬೊಲಿವಿಯಾ ಸೈನ್ಯಕ್ಕೆ ಸೆರೆಯಾಗುತ್ತಾನೆ. ಮರುದಿನ ಶಾಲೆಯೊಂದರಲ್ಲಿ ಚೆ ಮತ್ತು ಅವನ ಸಂಗಾತಿ ವಿಲ್ಲಿಯನ್ನು ಗುಂಡಿಟ್ಟು ಕೊಲ್ಲಲಾಗುತ್ತದೆ. ಚೆ ಬೆನ್ನಿನ ಚೀಲದಲ್ಲಿದ್ದ ಅವನ ಡೈರಿ ಮತ್ತಿತರ ಸಾಮಗ್ರಿಗಳನ್ನು ಶತ್ರುಗಳು ಸಾಗಿಸಿಬಿಟ್ಟಿದ್ದರು. 'ಚೆ'ನನ್ನು ಕೊಂದ ಜಾಗದ ಸುಳಿವು ಸಿಗದಂತೆ ಕಟ್ಟಡವೊಂದನ್ನು ಕಟ್ಟಲಾಯಿತು.

ಬ್ಯಾರಿಯೆಂಟೋಸ್‌ನ ಆಂತರಿಕ ವ್ಯವಹಾರಗಳ ಮಂತ್ರಿಯಾಗಿದ್ದ ಡಾ. ಆರ್ಗ್ಯುದಾಸ್ ಬೊಲಿವಿಯಾದಲ್ಲಿನ ಸರ್ವಾಧಿಕಾರದ ಕ್ರೌರ್ಯಕ್ಕೆ ಬೇಸತ್ತುಹೋಗಿದ್ದ ಅಪ್ಪಟ ಮನುಷ್ಯ. ಚೆ ಬಗೆಗಿನ ಪ್ರೀತಿಯಿಂದ ದಿನಚರಿಯನ್ನು, ಚೆ ಸತ್ತ ದಿನ ಪ್ಲಾಸ್ಟರಿನಿಂದ ತಯಾರಿಸಿದ ಮುಖದ ಪಡಿಯಚ್ಚನ್ನು ಮತ್ತು ಕತ್ತರಿಸಿಟ್ಟಿದ್ದ ಅವನ ಕೈಗಳನ್ನು ಕ್ಯೂಬಾಕ್ಕೆ ಜೋಪಾನದಿಂದ ಕಳಿಸಿಕೊಟ್ಟಿದ್ದನು.

1970ರ ಜುಲೈ 26ರಲ್ಲಿ ನಡೆದ ಚೆ ಸ್ಮಾರಕ ಸಭೆಯಲ್ಲಿ ಫಿಡಲ್ ಕಾಸ್ಟ್ರೋ ಒಮ್ಮೆ 'ಅವರು 'ಚೆ' ಅವರನ್ನು ಕೊಂದರು. ಅವರ ದಿನಚರಿ, ಕೈಗಳು, ಮುಖದ ಪಡಿಯಚ್ಚು ನಮಗೆ ತಲುಪುವುದನ್ನು ತಡೆಯಲಾಗಲಿಲ್ಲ. ಇವೆಲ್ಲವನ್ನು ಕ್ಯೂಬಾಕ್ಕೆ ಕಳಿಸಲು, ಚೆ ವಿರುದ್ಧ ಹೋರಾಡುತ್ತಿದ್ದ ಬೊಲಿವಿಯನ್ ಸರ್ಕಾರದ ಸದಸ್ಯನೊಬ್ಬ ಎರಡು ಬಾರಿ ತನ್ನ ಪ್ರಾಣವನ್ನೇ ಅಪಾಯಕ್ಕೆ ಒಡ್ಡಿದ್ದ ಎನ್ನುವುದು ಚೆ ಮಹತ್ವವನ್ನು ಸೂಚಿಸುವಂತಿದೆ.

ಚೆ ಎಂದರೆ ಜಗತ್ತಿನ ಯಾವ ಮೂಲೆಯಲ್ಲಾದರೂ ಸರ್ವಾಧಿಕಾರಗಳ ದುರಾಡಳಿತವನ್ನು ಪ್ರತಿಭಟಿಸಲು ಇರುವ ಕ್ರಾಂತಿಕಾರಕ ಶಕ್ತಿ ಎಂದೇ ಭಾವಿಸಬೇಕು. ಸಾಯುವ ಕೊನೆಗಳಿಯಲ್ಲೂ ತಾನು ಕ್ರಾಂತಿಯ ಅಮರತ್ವದ ಬಗ್ಗೆ ಚಿಂತಿಸುತ್ತಿದ್ದೇನೆ ಎಂದು ನುಡಿದ ಚೆ, ಕುಟುಂಬಕ್ಕಿಂತಲೂ ದೇಶ ದೊಡ್ಡದು ಎಂದು ಭಾವಿಸಿದವನು. ಚೆ ಎಂದರೆ ನಂದಲಾರದ ಅದಮ್ಯಚೇತನ. ಅವನ 'ಮೋಟರ್ ಸೈಕಲ್ ಡೈರಿ' ಹಾಗೂ ಬೊಲಿವಿಯಾದ ಗೆರಿಲ್ಲಾ ಹೋರಾಟವನ್ನು ಕುರಿತ ಡೈರಿ ಬರಹಗಳು ಇಂದಿಗೂ ಓದುಗರನ್ನು ಆಕರ್ಷಿಸುವ ಜೀವಂತ ಕೃತಿಗಳಾಗಿವೆ.

■ **ಅಮೃತಮತಿ**

## ಮಾತೇ ಮುತ್ತು

- ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ. ಪೂರ್ಣ ದುಃಖಿಯೂ ಅಲ್ಲ.
  –ಗೌತಮ ಬುದ್ಧ
- ಹುಲಿಯನ್ನು ನೋಡಿ ಬಂದವರು ಬೆಕ್ಕಿಗೆ ಹೆದರುತ್ತಾರೆಯೇ?
  –ಮುದ್ದಣ
- ಆಧ್ಯಾತ್ಮಿಕ ಜೀವನದಲ್ಲಿ ಪವಾಡ ಎಂಬುದು ಒಂದು ದೊಡ್ಡ ಆತಂಕ.
  –ಸ್ವಾಮಿ ವಿವೇಕಾನಂದ
- ಭವಿಷ್ಯದಲ್ಲಿ ಒಂದಲ್ಲ ಒಂದು ದಿನ ಉತ್ತಮವಾದ ಅವಕಾಶ ಬಂದೇ ಬರುತ್ತದೆ.
  –ಅಬ್ರಹಾಂ ಲಿಂಕನ್
- ಉಪಚಾರ ಮಾಡಿದ ಸಜ್ಜನರಲ್ಲಿಯೂ ನೀಚನು ಅಪಕಾರವನ್ನೇ ಮಾಡಲು ಬಯಸುತ್ತಾನೆ,
  –ಕರ್ನಾಟಕ ಪಂಚತಂತ್ರ
- ನಮ್ಮ ಶಕ್ತಿ–ಸಾಮರ್ಥ್ಯದಿಂದ ಸಾಧಿಸಲು ಸಾಧ್ಯವಾಗದೆ ಇರುವುದನ್ನು ತಾಳ್ಮೆಯ ಮೂಲಕ ಸಾಧಿಸಬಹುದು.
  –ಎಡ್ಮಂಡ್ ಬರ್ಕ್
- ನನಗೆ ಗೊತ್ತಿರುವ ಒಂದೇ ಒಂದು ವಿಷಯವಿದೆ. ಅದು ಏನೆಂದರೆ ನನಗೇನೂ ಗೊತ್ತಿಲ್ಲ. ಇದೇ ಎಲ್ಲ ತಿಳಿವಳಿಕೆಯ ಆರಂಭ.
  –ಸಾಕ್ರಟೀಸ್
- ಮೊದಲ ಪ್ರಯತ್ನದಲ್ಲಿ ಯಶಸ್ಸು ಸಿಗದಿದ್ದರೆ ಮತ್ತೊಮ್ಮೆ ಯತ್ನಿಸು ಯಶಸ್ಸು ಒಲಿಯುತ್ತೆ.
  –ಇಂಗ್ಲೆಂಡ್ ಗಾದೆ